ಶ್ರೀ ಟಿ. ಎನ್. ನರಸಿಂಹಮೂರ್ತಿ.—ಮಾನ್ಯ ಅಧ್ಯಕ್ಷರೇ, ಎಲ್ಲಾ ಪುರಸಭೆಗಳೂ ಮಾತೃ ಸಂಸ್ಥೆಗಳೆಂದು ತಿಳಿದು ಸಹಾಯಧನವನ್ನು ಕೊಡುತ್ತಿದ್ದೇವೆ. ಮಾನ್ಯ ಸದಸ್ಯರು ಇದಕ್ಕೆ ಮಲತಾಯಿ ಧೋರಣೆ ಎನ್ನುವುದು ನನಗೆ ಅರ್ಥವಾಗುವುದಿಲ್ಲ. ಅಪ್ರೋಪ್ರಿಯೇಟ್ ಟೈಮ್‌ನಲ್ಲಿ ಎಲ್ಲಾ ಪುರಸಭೆಗಳಿಗೂ ಹಣವನ್ನು ಬಿಡುಗಡೆ ಮಾಡುತ್ತೇವೆ. ಈ ಬಡ್ಜೆಟ್ ಅಧಿವೇಶನ ಮುಗಿದ ತಕ್ಷಣವೇ ಯಾವ ಯಾವ ಪುರಸಭೆಗಳಿಗೆ ಅದ್ಯತೆ ಮೇರೆಗೆ ಹಣ ಕೊಡಬೇಕೆನ್ನುವ ಬಗ್ಗೆ ಶೀಘ್ರವಾಗಿ ಕ್ರಮ ಕೈಗೊಳ್ಳುತ್ತೇವೆ.

ಚುಕ್ಕೆ ಗುರುತಿನ ಪ್ರಶ್ನೆ

ಶಹಬಾದ್ ಪಟ್ಟಣಕ್ಕೆ ನೀರಿನ ಸಮಸ್ಯೆ

೧೨೦೪. ಶ್ರೀ ಬಿ. ಎಸ್. ಚವ್ಹಾಣ್ (ಶಹಬಾದ್).—ಮಾನ್ಯ ಬಂದರು, ಮೀನುಗಾರಿಕೆ, ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

(ಅ) ಗುಲ್ಬರ್ಗಾ ಜಿಲ್ಲೆಯ ಶಹಬಾದ್ ಟೌನ್‌ನಲ್ಲಿ ಕುಡಿಯುವ ನೀರಿನ ಟ್ಯಾಂಕನ್ನು ಎಂದಿನಿಂದ ನಿರ್ಮಿಸಲಾಗುತ್ತಿದೆ ?

(ಆ) ಈ ನಿರ್ಮಾಣಕ್ಕಾಗಿ ಒಟ್ಟು ಎಷ್ಟು ಹಣ ವೆಚ್ಚ ಮಾಡಲಾಗುವುದು ?

(ಇ) ಈ ನಿರ್ಮಾಣಕ್ಕಾಗಿ ಇಲ್ಲಿಯವರೆಗೆ ಎಷ್ಟು ಹಣ ವೆಚ್ಚ ಮಾಡಲಾಗಿದೆ ?

(ಈ) ಸದರಿ ನೀರಿನ ಟ್ಯಾಂಕಿನ ನಿರ್ಮಾಣ ವಿಳಂಬವಾಗಲಿಕ್ಕೆ ಕಾರಣಗಳೇನು ?

(ಉ) ಈಗ ನಿರ್ಮಾಣವಾಗುತ್ತಿರುವ ನೀರಿನ ಟ್ಯಾಂಕ್ ಕಾರ್ಯ ಯಾವ ಹಂತದಲ್ಲಿದೆ ?

(ಊ) ಇದನ್ನು ಯಾವಾಗ ಪೂರ್ಣಗೊಳಿಸಲಾಗುವುದು ?

ಶ್ರೀ ಟಿ. ಎನ್. ನರಸಿಂಹಮೂರ್ತಿ (ಬಂದರು, ಮೀನುಗಾರಿಕೆ, ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—

(ಅ) ಕುಡಿಯುವ ನೀರಿನ ಟ್ಯಾಂಕನ್ನು ಕಟ್ಟುವ ಕೆಲಸವನ್ನು ೮/೮೫ರಲ್ಲಿ ಪ್ರಾರಂಭಿಸಲಾಯಿತು.

(ಆ) ಈ ನೀರಿನ ಟ್ಯಾಂಕಿನ ನಿರ್ಮಾಣ ಕಾರ್ಯ ಮಾಡಿಮುಗಿಸಲು ಒಟ್ಟು ೧೬.೩೨ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಲಾಗುವುದು.

(ಇ) ಇಲ್ಲಿಯವರೆಗೆ ಈ ಕೆಲಸಕ್ಕೆ ೧೩.೧೨ ಲಕ್ಷ ರೂಪಾಯಿಗಳನ್ನು ವೆಚ್ಚ ಮಾಡಲಾಗಿದೆ.

(ಈ) ಬೀರಲಿಂಗೇಶ್ವರ ದೇವಸ್ಥಾನದ ಪದಾಧಿಕಾರಿಗಳು ತೆಗೆದ ಆಕ್ಷೇಪಣಾರಿ ಭೂ ವಿವಾದದಿಂದಾಗಿ ದಿನಾಂಕ ೨೪-೮-೮೪ ರಿಂದ ೧೬-೮-೮೫ರವರೆಗೆ ಕೆಲಸವನ್ನು ಪ್ರಾರಂಭಿಸಲಾಗಲಿಲ್ಲ. ನಂತರ ೮/೮೫ರಲ್ಲಿ ಕೆಲಸವನ್ನು ಆರಂಭಿಸಲಾಯಿತು. ಆದರೆ, ಗುತ್ತಿಗೆದಾರರ ಆನಾರೋಗ್ಯದ ನಿಮಿತ್ತ ಕೆಲಸವನ್ನು ನಿಲ್ಲಿಸಲಾಯಿತು, ಇದಲ್ಲದೆ ಈ ಕೆಲಸದ ಗುತ್ತಿಗೆದಾರರು ೧೪-೪-೮೯ರಂದು ನಿಧನ ಹೊಂದಿದರು. ಬಾಕಿ ಉಳಿದ ಕೆಲಸಗಳನ್ನು ಮಾಡಲು ದಿವಂಗತ ಗುತ್ತಿಗೆದಾರರ ಅಧಿಕಾರ ಪತ್ರವನ್ನು ಹೊಂದಿದ್ದವರಿಗೆ ವಹಿಸಿ ಕೊಡಲಾಯಿತು.

(ಉ) ಮೊದಲನೇ ಆಂಕಣಕ್ಕೆ ಮೇಲ್ಛಾವಣಿ ಹಾಕಲಾಗಿದ್ದು ಇನ್ನೊಂದು ಆಂಕಣದ ಸೆಂಟ್ರಿಂಗ್ ಕೆಲಸವು ಮುಗಿದಿದ್ದು ಕಂಬಿ ಕಟ್ಟುವ ಕೆಲಸವನ್ನು ತೆಗೆದುಕೊಳ್ಳಲಾಗುತ್ತಿದೆ.

(ಊ) ಈ ಟ್ಯಾಂಕಿನ ಕೆಲಸವನ್ನು ನವೆಂಬರ್ ೧೯೯೦ರ ವೇಳೆಗೆ ಮುಗಿಸಲು ಉದ್ದೇಶಿಸಲಾಗಿದೆ.

ಶ್ರೀ ಬಿ. ಎಸ್. ಚವ್ಹಾಣ್.—ಸನ್ಮಾನ್ಯ ಅಧ್ಯಕ್ಷರೇ, ಶಹಬಾದ್ ಪಟ್ಟಣವು ಗುಲ್ಬರ್ಗಾ ಜಿಲ್ಲೆಯಲ್ಲಿ ಪಾಪ್ಯುಲೇಷನ್ ಸಂಖ್ಯೆಯಲ್ಲಿ ೨ನೇ ಭಾಗದಲ್ಲಿದೆ. ಈ ಪಟ್ಟಣದಲ್ಲಿ ಕನಿಷ್ಟ ಒಂದು ಲಕ್ಷಕ್ಕಿಂತ ಹೆಚ್ಚು ಜನಸಂಖ್ಯೆ ಇದೆ. ಅಲ್ಲಿರುವ ನೀರಿನ ಸಮಸ್ಯೆ ಮಿತಿಮೀರಿದ್ದಾಗಿದೆ. ಮಾನ್ಯ ಮಂತ್ರಿಗಳ ಉತ್ತರದ ಪ್ರಕಾರ ೧೯೮೫ರಲ್ಲಿ ಪ್ರಾರಂಭವಾದ ಈ ಕೆಲಸ ಇನ್ನೂ ಮಂದಗತಿಯಲ್ಲಿ ಸಾಗುತ್ತಿದೆ. ಏಕೆ ಅತಿ ವೇಗವಾಗಿ ಕೆಲಸವನ್ನು ಮಾಡಲಿಲ್ಲವೆಂದು ಮಾನ್ಯ ಮಂತ್ರಿಗಳಲ್ಲಿ ಕೇಳುತ್ತಿದ್ದೇನೆ.

ಶ್ರೀ ಟಿ ಎನ್. ನರಸಿಂಹಮೂರ್ತಿ.—ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಸಭಸ್ಯರು ಅಭಿಪ್ರಾಯ ಪಟ್ಟಂತೆ ಆ ಕೆಲಸ ಮಂದಗತಿಯಲ್ಲಿ ಸಾಗುತ್ತಿದೆ. ಇದಕ್ಕೆ ಎರಡು ಪ್ರಮುಖ ಕಾರಣಗಳಿವೆ. ಈ ಕೆಲಸವನ್ನು ಮಾಡಿಸುತ್ತಿದ್ದ ಕಂಟ್ರಾಕ್ಟರ್ ಏನಿದ್ದರು, ಅವರು ಸತ್ತು ಹೋಗಿರುವ ವಿಷಯ ಮಾನ್ಯ ಸದಸ್ಯರಿಗೂ ಗೊತ್ತಿದೆ. ಅವರ ಮೇಲೆ ಇನ್ನೊಬ್ಬ ಕಂಟ್ರಾಕ್ಟರ್‌ಗೆ ಆ ಕೆಲಸವನ್ನು ವಹಿಸಿ ಅವರು ಅರ್ಧಕ್ಕೆ ಮೇಲೆಗೆ ಕೆಲಸ ಮಾಡಬೇಕೆಂದು ನಿರ್ದಿಷ್ಟವಾಗಿ ಸೂಚನೆ ಕೊಡಲಾಗಿದೆ. ಇನ್ನೂ ಬಹುಮುಖ್ಯವಾದ ಕಾರಣ ಎಂದರೆ, ಈ ಕಾಮಗಾರಿ ನಡೆಯುವ ಸ್ಥಳ ಏನಿದೆ. ಅದು ಒಂದು ದೇವಸ್ಥಾನಕ್ಕೆ ಸೇರಿರುವುದರಿಂದ ಆ ದೇವಸ್ಥಾನದ ಆಡಳಿತ ಮಂಡಳಿಯವರು ಅಡ್ಡಿ ಆಡಚಣೆ ಉಂಟುಮಾಡಿದ್ದರಿಂದ ಆ ಕೆಲಸ ಮಂದ ಗತಿಯಲ್ಲಿ ಸಾಗುವಂತಾಯಿತು. ಈಗ ಕೆಲಸವನ್ನು ಚುರುಕುಗೊಳಿಸುವುದಕ್ಕೆ ಸರ್ಕಾರ ಎಲ್ಲಾ ಕ್ರಮ ಕೈಗೊಂಡಿದೆಯೆಂದು ತಮ್ಮ ಮುಖೇನ ಮಾನ್ಯ ಸದಸ್ಯರಿಗೆ ಹೇಳುತ್ತೇನೆ.

ಶ್ರೀ ಬಿ. ಎಸ . ಜವ್ವಾಣ್.—ಈ ಕೆಲಸವನ್ನು ಬಹಳ ವೇಗವಾಗಿ ಮಾಡಿ ಮುಗಿಸುವುದಕ್ಕೆ ಕಂಟ್ರಾಕ್ಟರ್‌ಗಳಿಗೆ ಸೂಚನೆ ಕೊಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಜಿ. ಎನ್. ನರಸಿಂಹಮೂರ್ತಿ.—ಆ ಸಲಹೆಯನ್ನು ಒಪ್ಪಿಕೊಳ್ಳಲಾಗಿದೆ.

ಮೂಡಬಿದ್ರೆ ಪಟ್ಟಣಕ್ಕೆ ಕಂಡಿಯಂವ ನೀರಿನ ಕೊರತೆ

೧೩೯೮. ಶ್ರೀ ಕೆ. ಸೋಮಪ್ಪ ಸುವರ್ಣ (ಮೂಡಬಿದ್ರೆ).—ಮಾನ್ಯ ಬಂದರು, ಮೀನುಗಾರಿಕೆ, ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ;—

(೧) ಮೂಡಬಿದ್ರೆ ಪುರಸಭೆಯ ವ್ಯಾಪ್ತಿಯಲ್ಲಿ ನೀರಿನ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

(೨) ಹಾಗಿದ್ದಲ್ಲಿ ಜ್ಯೋತಿ ನಗರದಲ್ಲಿ ನೀರಿನ ಟ್ಯಾಂಕ್ ನಿರ್ಮಿಸಲು ಸದರಿ ಪುರಸಭೆಯವರು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಗೆ ರೂ. ೩.೭೨ ಲಕ್ಷ ವಂತಿಗೆ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಹಾಗಿದ್ದಲ್ಲಿ ಯಾವಾಗ ?

(೩) ಈವರೆವಿಗೂ ಈ ಕೆಲಸವನ್ನು ಪ್ರಾರಂಭಿಸದಿರಲು ಕಾರಣವೇನು ?

(೪) ಜೈನ ಕಾಶಿಯೆಂದು ಹೆಸರಾಗಿರುವ ಈ ಪಟ್ಟಣದ ಕುಡಿಯುವ ನೀರಿನ ಯೋಜನೆಯನ್ನು ಕೂಡಲೇ ಪ್ರಾರಂಭಿಸಿ ಪೂರ್ಣಗೊಳಿಸಲಾಗುವುದೇ ?

ಶ್ರೀ ಟಿ. ಎನ್. ನರಸಿಂಹಮೂರ್ತಿ (ಬಂದರು, ಮೀನುಗಾರಿಕೆ, ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—

(೧) ಬಂದಿದೆ.

(೨) ಮೂಡಬಿದ್ರೆ ಪುರಸಭೆಯವರು ಆವರ ವತಿಯಿಂದ ಈ ಕಾಮಗಾರಿಗೆ ೩.೨,೦೦೦–೦೦ ರೂ.ಗಳನ್ನು ಪಾವತಿ ಮಾಡಿದ್ದಾರೆ, ಸರ್ಕಾರವು ಪುರಸಭೆಗೆ ನೀರಂ ಸರಬರಾಜು ಅಭಿವೃದ್ಧಿಗಾಗಿ ಮಾರ್ಚಿ ೧೯೯೦ರಲ್ಲಿ ಮಂಜೂರಾದ ೯೩.೦೫ ಲಕ್ಷ ರೂಪಾಯಿಗಳ ಅನುದಾನ ಪೈಕಿ ಈ ಕಾಮಗಾರಿಗೆ ಒಂದು ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿರುತ್ತದೆ, ಒಟ್ಟು ಠೇವಣಿಯಲ್ಲಿ ರೂ. ೧.೩೨ ಲಕ್ಷ ಗಳು ಆಗಿರುತ್ತದೆ.

(೩) ಪುರಸಭೆಯವರು ಈ ಕಾಮಗಾರಿಗೆ ೩.೭೫ ಲಕ್ಷ ರೂಪಾಯಿಗಳ ಪ್ರತಿಯಾಗಿ ೧.೩೨ ಲಕ್ಷ ರೂಪಾಯಿಗಳನ್ನು ಮಾತ್ರ ಪಾವತಿ ಮಾಡಿರುವುದರಿಂದ ಈ ಕೆಲಸ ಪ್ರಾರಂಭಿಸಿರುವುದಿಲ್ಲ.

(೪) ಆದಾಗ್ಯೂ ಜ್ಯೋತಿ ನಗರದಲ್ಲಿ ಜಲಸಂಗ್ರಹಾಗಾರ ಕೆಲಸವನ್ನು ಕೈಗೊಂಡು ಮುಗಿಸಲಾಗುವುದು,

ಶ್ರೀ ಕೆ. ಸೋಮಪ್ಪ ಸುವರ್ಣ .—ಮಾನ್ಯ ಅಧ್ಯಕ್ಷರೆ, ಮೂಡುಬಿದರೆಯು ಇಂದು ಭಾರತದಲ್ಲಿ ಜೈನಕಾಶಿ ಎಂದು ಹೆಸರನ್ನು ಪಡೆದಿದೆ. ಆದರೆ ಇಂದು ಅಲ್ಲಿಗೆ ಬರುವ ಸಾವಿರಾರು ಯಾತ್ರಿಕರಿಗೆ ನೀರಿನ ಕೊರತೆ ಇರುವುದರಿಂದ ಅಲ್ಲಿಗೆ ಬರುವ ಯಾತ್ರಿಕರು ಆಲೋಚಿಸುವ ಪ್ರಮೇಯ ಬಂದೊದಗಿದೆ. ೧.೩೨ ಲಕ್ಷ ರೂಪಾಯಿಗಳನ್ನು ಅಲ್ಲಿಯ ಪುರಸಭೆಯವರು ಕಟ್ಟಿದ್ದಾರೆ. ಈ ಬಾರಿ ೧೯೯೦ರಲ್ಲಿ ಪ್ರತಿಯೊಂದು ಪುರಸಭೆಗೂ ೧.೫೦ ಲಕ್ಷ ರೂಪಾಯಿಗಳನ್ನು ಸ್ಟೇಟ್ಸಿಟಿ ಆಫ್ ವಾಟರ್ ಸ್ಕೀಮ್‌ನಲ್ಲಿ ಕೊಟ್ಟಿದ್ದೀರಿ. ಆದರೆ ಮೂಡುಬಿದಿರೆಗೆ ಈ ಪಟ್ಟಿಯಲ್ಲಿ ೧.೫೦ ಲಕ್ಷ ರೂಪಾಯಿಗಳು ಸಿಕ್ಕಿಲ್ಲಿಲ್ಲ.